ಪ್ರಾರ್ಥನೆ

# ಶ್ರೀರಾಮಕೃಷ್ಣಾವತಾರ ಸ್ತೋತ್ರಮ್

**ಸಲ್ಲೋಕಾ ವಿಷಯವಿರಾಗಿಣೋ ಯದರ್ಥಂ**
**ಸಂತ್ಯಕ್ತಃ ಸುಖನಿವಹೋ ಬುಧೈಶ್ಚ ಬಾಲ್ಯಾತ್ ।**
**ಯಲ್ಲಬ್ಧುಂ ಕಠಿಣತಪೋ ಹಿ ಚರ್ಯತೇ ಜ್ಞೈ-**
**ರ್ಲಿಪ್ಸ್ಯಂತೇ ತ್ರಿದಶಗಣಾಃ ಸದಾ ಪದಂ ಯತ್ ॥**

ಸಜ್ಜನರು ಯಾವುದಕ್ಕಾಗಿ ಲೌಕಿಕವಾದ ಸುಖಭೋಗಗಳಲ್ಲಿ ವಿರಾಗವನ್ನು ಹೊಂದುವರೋ, ಬಲ್ಲವರು ಬಾಲ್ಯದಿಂದಲೇ ಸುಖರಾಶಿಯನ್ನು ತ್ಯಜಿಸುವರೋ, ಜ್ಞಾನಿ ಸಾಧಕರು ಯಾವುದನ್ನು ಪಡೆಯಲು ಕಠಿಣ ತಪಸ್ಸನ್ನು ಆಚರಿಸುವರೋ, ಯಾವ ಸ್ಥಾನವನ್ನು ಹೊಂದಲು ದೇವತೆಗಳೂ ಹಂಬಲಿಸುವರೋ —

**ಯಸ್ಮಾನ್ನಾಸ್ತಿ ಭಗವತೋ ಹಿ ಕಿಂಚಿದೂರ್ಧ್ವಂ**
**ಸುಪ್ರಾಪ್ಯಶ್ಚ ನ ಖಲು ಕಸ್ಯಚಿದ್ಯತೋಽನ್ಯಃ ।**
**ಸೋಽಸಾವೇವ ಪರಮಹಂಸರಾಮಕೃಷ್ಣಃ**
**ಸರ್ವಜ್ಞಃ ಸಕಲಮನೋಮತಃ ಪ್ರಶಾಂತಃ ॥**

ಯಾವ ಪರಮಾತ್ಮನನ್ನು ಮೀರಿದ್ದು ಬೇರೆ ಯಾವುದೂ ಇಲ್ಲವೋ, ಯಾರು ಎಲ್ಲರಿಗೂ ಸುಲಭವಾಗಿ ಲಭ್ಯನೋ, ಅಂತಹ ಸರ್ವಜ್ಞನಾದ, ಮನಸ್ಸಿನಿಂದ ಎಲ್ಲರೂ ಬಯಸುವಂತಹ, ಪ್ರಶಾಂತರೂ ಆದ ಪರಮಹಂಸ ರಾಮಕೃಷ್ಣರು ಇವರು.

**ರಕ್ಷಾರ್ಥಂ ನಿಜವಚನಂ ತ್ರಿತಾಪಹರ್ತಾ**
**ಗೌರಾಂಗೇನ ಭಗವತಾ ಪ್ರತಿಶ್ರುತಂ ಯತ್ ।**
**ಭಕ್ತಾರ್ಥಂ ಪರಮದಯಾಲ ಆಗತಸ್ತ್ವಂ**
**ಮಹ್ಯಾಂ ತೇ ಪುರುಷ ಸಮರ್ಪಯಾಮಿ ಸರ್ವಮ್ ॥**

ತಾಪತ್ರಯಗಳನ್ನು ದೂರ ಮಾಡುವ ಪರಮಪೂಜ್ಯ ಗೌರಾಂಗರು ತಮ್ಮ ಮಾತನ್ನು ರಕ್ಷಿಸಲು ಏನು ಪ್ರತಿಜ್ಞೆ ಮಾಡಿದ್ದರೋ, ಅದಕ್ಕಾಗಿ ಪರಮದಯಾಳುವಾದ ತಾವು ಭಕ್ತರಿಗಾಗಿ ಬಂದಿರುವಿರಿ. ಅಂತಹ ಪರಮಪುರುಷರಾದ ನಿಮಗೆ ಭೂಮಿಯಲ್ಲಿನ ಎಲ್ಲವನ್ನೂ ಸಮರ್ಪಿಸುತ್ತೇನೆ.

**ಛದ್ಮಪ್ರಸಾಧನಧರೋಽಸಿ ವಿವೇತ್ತಿ ಕಸ್ತೇ**
**ಕೃಷ್ಣಧುನಾವತರಣಸ್ಯ ನಿಗೂಢತತ್ತ್ವಮ್।**
**ಸ್ವೇನೈವ ತೇನ್ನ ಕಥಿತಂ ಶಿವ ತ್ವತ್ಪ್ರಿಯೇಭ್ಯೋ**
**ಗುಪ್ತಾವತಾರ ಭಗವನ್ ಭವತಃ ಕೃಪೈವಮ್ ॥**

ಹೇ ಕೃಷ್ಣರೂಪಿ! ನೀವು ಕಪಟವೇಷ ಧರಿಸಿ ಬಂದಿದ್ದೀರಿ. ನಿಮ್ಮ ಈ ಅವತಾರದ ನಿಗೂಢ ತತ್ತ್ವವನ್ನು ಯಾರು ತಾನೇ ಅರಿಯಬಲ್ಲರು! ಶಿವಸ್ವರೂಪಿಯೆ, ನೀವೇ ನಿಮ್ಮ ಪ್ರಿಯ ಶಿಷ್ಯರಿಗೆ ಹೇಳದಿದ್ದರೆ ಯಾರಿಗೆ ತಾನೆ ಗೊತ್ತಾಗುತ್ತಿತ್ತು ? ಭಗವನ್, ಗೂಢ ಅವತಾರ ಪುರುಷರಾದ ನಿಮ್ಮ ಕೃಪೆಯ ಸ್ವರೂಪ ಇದು.

— ಸ್ವಾಮಿ ತ್ರಿಗುಣಾತೀತಾನಂದ

## ಸೂಕ್ತಿಪ್ರಭ

ಎಷ್ಟು ನಿಧಾನವಾಗಿ ನೀನು ಚಲಿಸುವೆ ಎಂಬುದು ಮುಖ್ಯವಲ್ಲ. ನೀನು ನಿಲ್ಲದಿರುವೆ ಎಂಬುದೇ ಮುಖ್ಯ .

— ಕನ್‌ಫ್ಯೂಶಿಯಸ್

ಇತರರ ಬಗ್ಗೆ ಮೃದುವಾಗಿರು; ಆದರೆ ನಿನ್ನ ಬಗ್ಗೆ ಕಠಿಣವಾಗಿರು.

— ಆವಿಲಾದ ಸಂತ ಥೆರೆಸಾ

ವಿದ್ಯೆಯೆಂಬುದು ಮನುಷ್ಯನ ವಿಶೇಷವಾದ ರೂಪ; ಮತ್ತು ಅದು ಅವನ ಬಚ್ಚಿಟ್ಟು ಕಾಪಾಡಲ್ಪಟ್ಟ ಹಣ. ವಿದ್ಯೆಯು ಅವನಿಗೆ ಸುಖಸಂತೋಷಗಳನ್ನೂ ಕೀರ್ತಿಯನ್ನೂ ಉಂಟು ಮಾಡುತ್ತದೆ. ಅದು ಅವನ ಗುರುಗಳಿಗೆ ಗುರು. ಪರದೇಶಕ್ಕೆ ಹೊರಟಾಗ ಅದೇ ಅವನ ಬಂಧು. ಅದೇ ಅವನಿಗೆ ಪರದೈವ. ಅದು ರಾಜರಲ್ಲಿ ಪೂಜಿಸಲ್ಪಟ್ಟಿದೆ; ಹಣವಲ್ಲ. ವಿದ್ಯೆಯಿಲ್ಲದವನು ಪಶು.

— ಭರ್ತೃಹರಿ, 'ನೀತಿಶತಕದ' ದಲ್ಲಿ

ಕನಸುಗಳನ್ನು ನಂಬು. ಏಕೆಂದರೆ ಅವುಗಳಲ್ಲಿ ಅನಂತತೆ ಅಡಗಿದೆ.

— ಖಲೀಲ್ ಗಿಬ್ರಾನ್

ಭಕ್ತಿಯನ್ನು ಪಡೆದುಕೊಂಡ ನಂತರ ಬೇಕಾದರೆ ಸಂಸಾರದಲ್ಲಿ ಇರಬಹುದು. ಇದು ಕೈಗೆ ಎಣ್ಣೆ ಸವರಿಕೊಂಡು ಹಲಸಿನ ಹಣ್ಣನ್ನು ಬಿಡಿಸಿದ ಹಾಗೆ. ಅದರ ಅಂಟು ಕೈಗೆ ಅಂಟದು.

— ಶ್ರೀರಾಮಕೃಷ್ಣರು